3) ಇದಲ್ಲದೆ ಶಿಕ್ಷಣ ಇಲಾಖೆ "ಚಿನ್ನರ ಅಂಗಳ", "ಕೂಲಿಯಿಂದ ಶಾಲೆಗೆ", "ಬಾ ಮರಳಿ ಶಾಲೆಗೆ", "ಅಕ್ಷರ ದಾಸೋಹ", "ಸರ್ವ ಶಿಕ್ಷಣ ಅಭಿಯಾನ" ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುತ್ತಿದೆ.

4) ಮಕ್ಕಳ ಹಕ್ಕುಗಳ ಕೋಶವನ್ನು ಜೂನ್ 12 ರಿಂದ ಪ್ರಾರಂಭಿಸಿದೆ.

5) ಇದೇ ದಿನದಂದು ಜಾಗತಿಕ ಬಾಲ ಕಾರ್ಮಿಕ ವಿರೋಧಿ ದಿನವೆಂದು ಆಚರಿಸಿದೆ.

ಇ) ಪ್ರತಿ ಬಾಲ ಕಾರ್ಮಿಕ ವಿಶೇಷ ಶಾಲೆಗೆ ಪ್ರತಿ ವರ್ಷಕ್ಕೆ ರೂ. 3.40 ಲಕ್ಷ ಬೇಕಾಗುವುದು. ರೂ. 6 ಕೋಟಿ ಹಣ ಬೇಕಾಗುವುದೆಂದು ಅಂದಾಜಿಸಿದೆ. ಈಗಾಗಲೇ ರೂ. 80.5 ಲಕ್ಷ ಬಿಡುಗಡೆ ಆಗಿದ್ದು ಉಳಿದ ಹಣವನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ನೀಡಲಾಗುವುದು.

ಈ) ಹೌದು, ಕರ್ನಾಟಕ ರಾಜ್ಯವನ್ನು ಇಸವಿ 2007 ರೊಳಗೆ ಬಾಲ ಕಾರ್ಮಿಕ ರಹಿತ ರಾಜ್ಯವನ್ನಾಗಿ ಮಾಡುವ ಗುರಿ ಹೊಂದಿದೆ.

ಉ) 1) ಸರ್ಕಾರದವರು ಮೇ 2001 ರಂದು ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿದೆ.

2) ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯಡಿ 190 ಶಾಲೆಗಳು ಮಂಜೂರಾಗಿದೆ.

3) ರಾಜ್ಯ ಕ್ರಿಯಾ ಯೋಜನೆಯಡಿಯಲ್ಲಿ 100 ವಿಶೇಷ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

4) ನೊರಾಡ್ – ಯೂನಿಸಿಫ್ ಸಹಾಯದೊಂದಿಗೆ 18 ವಿಶೇಷ ಶಾಲೆಗಳನ್ನು ಮಾಗಡಿ, ಗುಲ್ಬರ್ಗ ಹಾಗೂ ದಾವಣಗೆರೆಗಳಲ್ಲಿ ಪ್ರಾರಂಭಿಸಿದೆ.

5) ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಯಡಿಯಲ್ಲಿ ಇನ್ನೂ 7 ವಿಶೇಷ ಶಾಲೆಗಳ ಮಂಜೂರಾತಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಕೃಷ್ಣರಾಜ ಸಾಗರದ ಬೃಂದಾವನ ಉದ್ಯಾನವನದ ನಿರ್ವಹಣೆ

4319(5014) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೃಷ್ಣರಾಜ ಸಾಗರದ ಬೃಂದಾವನ ಉದ್ಯಾನದ ನವೀಕರಣ, ನಿರ್ವಹಣೆ ಹಾಗೂ ಪ್ರವೇಶ ಶುಲ್ಕ ವಸೂಲಿಯನ್ನು ಖಾಸಗಿಯವರಿಗೆ ವಹಿಸಲು ಸರ್ಕಾರ ನಿರ್ಧರಿಸಿದೆಯೆ ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ;

ಇ) ಇದಕ್ಕಾಗಿ ಟೆಂಡರ್ ಕರೆಯಲಾಗಿದೆಯೇ ;

ಈ) ಇದರಿಂದ ಸರ್ಕಾರಕ್ಕೆ ಬರತಕ್ಕ ವರಮಾನವೆಷ್ಟು ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಹೌದು.

ಆ) ಉದ್ಯಾನವನವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿ ಪಡಿಸುವುದಕ್ಕಾಗಿ.

ಇ) ಹೌದು.

ಈ) ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿರುವುದಿಲ್ಲ.